Confederation of Indian Industry

| | |
|---|---|
| Headline | South Asia's largest construction equipment trade fair organised |
| **Publication** | Kannada Prabha |
| **Date** | 18.05.2022 |
| **Location** | Bangalore |

# ದಕ್ಷಿಣ ಏಷ್ಯಾದ ಬೃಹತ್ ಉಪಕರಣ ಮೇಳ

## ಎಕ್ಸ್‌ಕಾನ್‌ನಲ್ಲಿ ದೇಶ- ವಿದೇಶಗಳ ಕಂಪನಿ ಭಾಗಿ | ಮೇ 2ರವರೆಗೂ ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೈಗಾರಿಕೆ, ಕೃಷಿ, ಕಟ್ಟಡನಿರ್ಮಾಣಚಟುವಟಿಕೆಯಲ್ಲಿ ಬಳಸುವ ತಂತ್ರಜ್ಞಾನ, ಯಂತ್ರೋಪಕರಣಗಳನ್ನು ಅನಾವರಣಗೊಳಿಸುವ ಎಕ್ಸ್ ಕಾನ್ ವಸ್ತು ಪ್ರದರ್ಶನಕ್ಕೆ ನಗರದಲ್ಲಿ ಚಾಲನೆ ದೊರೆತಿದ್ದು ಮೇ 20 ರವರೆಗೂ ನಡೆಯಲಿದೆ.

ಬೆಂಗಳೂರು-ತುಮಕೂರು ರಸ್ತೆಯ ಮಾದಾವರದ ಬೆಂಗಳೂರು ಅಂತಾರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ವಸ್ತು ಪ್ರದರ್ಶನದಲ್ಲಿ ಕೃಷಿ, ಕೈಗಾರಿಕೆ, ಕಟ್ಟಡ ನಿರ್ಮಾಣ ಚಟುವಟಿಕೆಗಳಲ್ಲಿ ಬಳಸುವ ಸಣ್ಣಪುಟ್ಟ ವಸ್ತುಗಳಿಂದ ಹಿಡಿದು ಬೃಹತ್ ಯಂತ್ರೋಪಕರಣಗಳನ್ನು ಒಂದೇ ಸೂರಿನಡಿ ನೋಡುವ ಅವಕಾಶ ಲಭ್ಯವಿದೆ. ದಕ್ಷಿಣ ಏಷ್ಯಾದ ಅತಿದೊಡ್ಡ ನಿರ್ಮಾಣ ವಲಯದ ಉಪಕರಣಗಳ ಮೇಳ ಇದಾಗಿದೆ.

### 10 ಅಡಿ ಎತ್ತರದ ಈ ಟೈರ್ ಬೆಲೆ 13 ಲಕ್ಷ ರು.!



ಗುಜರಾತ್ ಮೂಲದ ಬಾಲಕೃಷ್ಣ ಟೈರ್(ಬಿಕೆಟಿ) ಕಂಪನಿಯವರು ಪ್ರದರ್ಶನಕ್ಕಿಟ್ಟಿರುವ ಸುಮಾರು 10 ಅಡಿ ಎತ್ತರದ ಟೈರ್ ನೋಡುಗರನ್ನು ಸೆಳೆಯಿತು. 200 ಟನ್ ಸಾಮರ್ಥ್ಯ ತಡೆಯುವ ಈ ಟೈರ್ ಬೆಲೆ ಬರೋಬ್ಬರಿ 13 ಲಕ್ಷ ರುಪಾಯಿ. ಮೈನಿಂಗ್ ಪ್ರದೇಶಗಳಲ್ಲಿನ ಬೃಹತ್ ಟ್ರಕ್‌ಗಳಿಗೆ ಈ ಟೈರ್ ಬಳಕೆ ಮಾಡಲಾಗುತ್ತದೆ. 30 ಲಕ್ಷ ರು. ಮೌಲ್ಯದ ಟೈರ್‌ಗಳನ್ನೂ ಈ ಕಂಪನಿ ಉತ್ಪಾದಿಸುತ್ತಿದ್ದು ಶೇ.80 ರಷ್ಟು ಉತ್ಪನ್ನ ವಿದೇಶಕ್ಕೆ ರಫ್ತಾಗುತ್ತದೆ.

ದುರ್ಗಮ ಪ್ರದೇಶಗಳಿಗೆ ಡೀಸೆಲ್ ಸಾಗಿಸಲು ಮುಂಬೈನ ಜೆಮಿನಿ ಕಂಪನಿ ಚಿಕ್ಕ ವಾಹನದ ಮೂಲಕ ಸಾಗಿಸುವ ಮಿನಿ ಬಂಕ್ ಅನ್ನು ಆವಿಷ್ಕರಿಸಿದ್ದು 960 ಲೀಟರ್ ಡೀಸೆಲ್ ಅನ್ನು ಸಾಗಿಸಬಹುದು. ಪೆಟ್ರೋಲ್ ಬಂಕ್ ಮಾದರಿಯಲ್ಲೇ ಗನ್ ಇದ್ದು ಎಷ್ಟು ಲೀಟರ್ ಡೀಸೆಲ್ ಹಾಕಲಾಗಿದೆ ಎಂಬ ಲೆಕ್ಕವೂ ಸಿಗುತ್ತದೆ. ಶಾಲಾ ವಾಹನಗಳಿಗೆ ಡೀಸೆಲ್ ಹಾಕಲೂ ಇದರಿಂದ ಬಹಳಷ್ಟು ಅನುಕೂಲವಾಗುತ್ತದೆ ಎಂದು ಕಂಪನಿಯ ಮೂಲಗಳು ತಿಳಿಸಿವೆ. ಗಣಿಗಾರಿಕೆ ನಡೆಯುವ ಸ್ಥಳಗಳಲ್ಲಿ ವಾಹನಗಳ ಟೈರ್‌ಗಳು ಬಹಳ ಬೇಗ ಹಾಳಾಗುತ್ತವೆ. ಲೋಹದ ತುಂಡುಗಳು ಟೈರ್ ಪಂಕ್ಚರ್ ಮಾಡುತ್ತವೆ. ಇದನ್ನು ತಪ್ಪಿಸಲು ಟೈರ್‌ಗಳಿಗೇ ಕಬ್ಬಿಣದ ಕೊಂಡಿಗಳುಳ್ಳ ಬಲೆಯನ್ನೇ ಕಂಡುಹಿಡಿದಿದೆ ಟರ್ಕಿ ಮೂಲದ ಲಾಸ್ ಜಿರ್ ಕಂಪನಿ.

ಸಣ್ಣ ಪುಟ್ಟ ವಸ್ತುಗಳಷ್ಟೇ ಅಲ್ಲ, ಜೆಸಿಬಿ, ಹಿಟಾಚಿ, ಬೃಹತ್ ಕ್ರೇನ್, ಎಂ ಸ್ಯಾಂಡ್ ಫಿಲ್ಟರ್ ಮೆಷಿನ್, ಕಾಂಕ್ರೀಟ್ ಮಿಕ್ಸರ್, ಫ್ಲೋರ್ ಮಿಲ್, ರಿಲ್ಯಾಕ್ಸ್ ಚೇರ್ ಮತ್ತಿತರ ಉಪಕರಣಗಳನ್ನು ವಸ್ತು ಪ್ರದರ್ಶನದಲ್ಲಿ ಕಾಣಬಹುದು. ಇಟಲಿ, ಜರ್ಮನಿ, ಟರ್ಕಿ, ಸ್ಪೇನ್, ಬೆಲ್ಜಿಯಂ, ದಕ್ಷಿಣ ಕೊರಿಯಾ ಸೇರಿದಂತೆ ಹಲವು ರಾಷ್ಟ್ರಗಳ ಕಂಪನಿಗಳು ವಸ್ತು ಪ್ರದರ್ಶನದಲ್ಲಿ ಪಾಲ್ಗೊಂಡಿವೆ. ಮೊದಲ ದಿನ 6 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿ ವೀಕ್ಷಿಸಿದ್ದಾರೆ.